**ಡಾಕ್ಟರ ನಂದಾ ಶ್ರುತಿಯುತೆಗೆ**

ಶುಭವಾಗಲಿ ಈ ಜನ್ಮದಿನೋತ್ಸವ
ಡಾಕ್ಟರ ನಂದಾ ಶ್ರುತಿಯುತೆಗೆ
ಆಯುವು ನೂರಾಗಲಿ ದೊರೆಯಲಿ ಯಶ
ಶ್ರೇಯ ಸುಕೀರ್ತಿಮತಿಗೆ

ಗಾನ ಪ್ರತಿಭೆ ಎನೆ ಡಾಕ್ಟರ ನಂದಾ
ಪಾಟೀಲರದೇ ಸವಿನೆನಪು
ಗಾಯನಕೆಲೆಯೇ ಜೀವನ ಇವರದು
ಹಾಡಿದರೆಂದರೆ ಬಲು ಇಂಪು

ದಂಡಾಪೂರ್‌ರ ಬಳಿಯಲಿ ಕಲಿತರು
ಸಂಗೀತದ ಶಿಕ್ಷಣವನ್ನು
ಪ್ರಗತಿಯ ಸಾಧಿಸಿದರು ಆಶ್ರಯಿಸುತೆ
ಮುಜಮದಾರ ಪಂಡಿತರನ್ನು

ಸಂಗೀತದ ಜ್ಞಾನಾರ್ಜನೆಯಾದುದು
ಹಾನಗಲ್ಲ ಮನಸೂರರಲಿ
ಪಡೆದರು ಖ್ಯಾತಿಯ ಗಾಯನಕ್ಷೇತ್ರದಿ
ಹಾಡುತೆ ಬಹು ಬಾನುಲಿಗಳಲಿ

ಲಭಿಸಿತು ರಾಜ್ಯಪ್ರಶಸ್ತಿಯು ಬಾಲ್ಯದಿ
ಪ್ರಥಮ ಶ್ರೇಣಿ ಪ್ರತಿಸ್ಪರ್ಧೆಯಲಿ
ಸ್ವರಯಾತ್ರೆಯಲೀ ನಾಡಿನ ಕೀರ್ತಿಯ
ಬೆಳೆಗಿಸಿದರು ದಿಶೆದಿಶೆಗಳಲಿ

ವಿರಚಿತಗೊಂಡವು ಬಸವರಾಜ ರಾಜಗುರು
ಮನಸೂರವರ  ಚರಿತೆಗಳು
ಭೀಮಸೇನ ಜೋಶಿ ಬಾಳಪ್ಪಾ
ಹುಕ್ಕೇರಿಯರ ಪ್ರಬಂಧಗಳು

ಮಲ್ಲಿಕಾರ್ಜುನರ ಸುಪುತ್ರಿ ನಂದಾ

ಪಾಟೀಲರ ಮನೆ ಪುಷ್ಪದೊಲು
ಸ್ವರ ಸಂಗೀತದ ಲತೆಯಲಿ ಅರಳುತೆ
ಸೌರಭಿಸಿದೆ ಇಡಿದೇಶದಲೂ
ಸಾವಿರ ಸಂಗೀತದ ಕಾರ್ಯಕ್ರಮ
ನಡೆಸಿದ ಪ್ರತಿಭೆಯು ಇವರಲ್ಲಿ
ಅಂತರರಾಷ್ಟ್ರದ ಸಮ್ಮೇಲನದಲು
ಹೊಳೆದರು ಸ್ವರಗಾರುಡಿಯಲ್ಲಿ
ಸುತ ಶಿವಾಕುಮಾರ। ಸುತೆ ಅಶ್ವಿನಿಯರು
ಸಹ ಸಂಗೀತದ ಕ್ಷೇತ್ರದಲಿ
ತಾಯಿಯ ತೆರ ಪರಿಣತೆಯನು ಪಡೆಯುತೆ
ಹೆಸರಾದರು ಈ ನಾಡಿನಲಿ
ಸತ್ಯ ಶುದ್ಧಕಾಯಕ ಧ್ವನಿ ಮುದ್ರಿಕೆ
ದೇಹವೆ ದೇಗುಲ ಬಸವಪಥ
ಮನದ ಮುಂದಣ ಆಶೆಯೆ ಮಾಯೆ
ಎಂಬುದ ನಾಲ್ಕೂಸುಖ್ಯಾತ
ಮಲ್ಲಿಕಾರ್ಜುನರು ಪತಿವರ ಇವರಿಗೆ
ಸಕಲ ಸಹಾಯವಗೈದಿಹರು
ಸತಿಪತಿಗಳ ಈ ಜೋಡಿಯು ಅನುಪಮ
ಕತೆಯಲಿ ಮೇಲ್ಮೆಯ ಮೆರೆದಿಹರು
ಶುಭವಾಗಲಿ ಈ ಜನ್ಮದಿನೋತ್ಸವ
ಡಾಕ್ಟರ ನಂದಾ ಶ್ರುತಿಯುತೆಗೆ
ಆಯುವು ನೂರಾಗಲಿ ದೊರೆಯಲಿ ಯಶ
ಶ್ರೇಯ ಸುಕೀರ್ತಿಯು ಶುಭಮತಿಗೆ

ವ್ಹಿ. ಸಿ. ಐರಸಂಗ